REGISTERED WITH RNI NEW DELHI REG. N0.69683/97-Postal Registration No. RNP/KA/BGS/2259/2018-2020
Office of Posting: Bangalore PSO, Bangalore - 560026.; Date of Posting: Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 25 | ಸಂಚಿಕೆ : 45 | 13 ಫೆಬ್ರವರಿ 2019 | ಬುಧವಾರ | ಪುಟಗಳು : 8 | ಬೆಲೆ : 2/-

## 2019-20ನೇ ಸಾಲಿನಲ್ಲಿ ಒಟ್ಟು ರೂ.2,34,153 ಕೋಟಿ ಗಾತ್ರದ ಬಜೆಟ್ ಮಂಡನೆ

## ಶೇ.9.6ರಷ್ಟು ಆರ್ಥಿಕ ಬೆಳವಣಿಗೆ ನಿರೀಕ್ಷೆ : ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ

**ಬೆಂಗಳೂರು :** 2018–19ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಶೇ.9.6ರಷ್ಟು ಆರ್ಥಿಕ ಬೆಳವಣಿಗೆ ಸಾಧಿಸುವ ನಿರೀಕ್ಷೆ ಹೊಂದಿದೆ ಎಂದು ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ವಿಧಾನಮಂಡಳ ಅಧಿವೇಶನದಲ್ಲಿ 2019ರ ರಾಜ್ಯ ಬಜೆಟ್ ಮಂಡಿಸಿದ ಅವರು, 2017–18ರಲ್ಲಿ ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನ ಬೆಳವಣಿಗೆ ಶೇ.10.4ರಷ್ಟಿತ್ತು. ಆದರೆ ಕೃಷಿ ಬೆಳವಣಿಗೆ ಇಳಿಕೆಯಿಂದಾಗಿ ಈ ವರ್ಷ ಆರ್ಥಿಕ ಬೆಳವಣಿಗೆ ಕುಂಠಿತವಾಗುವ ನಿರೀಕ್ಷೆಯಿದೆ. ರಾಜ್ಯದಲ್ಲಿನ ಮಳೆ ಅಭಾವದಿಂದಾಗಿ ಈ ಸಲ ಕೃಷಿ ಬೆಳವಣಿಗೆ ಶೇ.4.8ಕ್ಕೆ ಕುಸಿಯಬಹುದು. ಆದರೆ ಕೈಗಾರಿಕೆ ಮತ್ತು ಸೇವಾ ವಲಯ 2018–19ರಲ್ಲಿ ಕ್ರಮವಾಗಿ ಶೇ.7.4 ಮತ್ತು ಶೇ.12.3ರಷ್ಟು ಪ್ರಗತಿ ಸಾಧಿಸಲಿವೆ. ಕಳೆದ ವರ್ಷ ಈ ಪ್ರಮಾಣ ಶೇ. 4.7 ಮತ್ತು ಶೇ.12.2ರಷ್ಟಿತ್ತು ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಇದೇ ವೇಳೆ ಅವರು ನೀರಾವರಿಗೆ ರೂ.17, 202 ಕೋಟಿ ಅನುದಾನ ಮೀಸಲಿರಿಸಿದ್ದು, ಕೃಷಿ ಸಂಬಂಧಿತ ಚಟುವಟಿಕೆಗಳಿಗೆ 46,850 ಕೋಟಿ ರೂಗಳನ್ನು ಮೀಸಲಿಡಲಾಗಿದೆ ಎಂದು ಹೇಳಿದರು.

**ರೂ.2,34,153 ಕೋಟಿ ಗಾತ್ರದ ಕರ್ನಾಟಕ ಬಜೆಟ್ ಮಂಡನೆ :** ಮುಖ್ಯಮಂತ್ರಿ



ಎಚ್.ಡಿ.ಕುಮಾರಸ್ವಾಮಿ 2019–20ನೇ ಸಾಲಿನಲ್ಲಿ ಒಟ್ಟು ರೂ.2,34,153 ಕೋಟಿ ಗಾತ್ರದ ಬಜೆಟ್ ಮಂಡನೆ ಮಾಡಿದ್ದಾರೆ. ಕೃಷಿ ಸಾಲ ಮನ್ನಾಕ್ಕೆ ರೂ.6500 ಕೋಟಿ ಮೀಸಲಿಡಲಾಗಿದ್ದು, ಕೃಷಿ ಮತ್ತು ಸಂಬಂಧಿತ ಕ್ಷೇತ್ರಕ್ಕೆ ರೂ.46,853 ಕೋಟಿ ಅನುದಾನ ನೀಡಲಾಗಿದೆ. ಜಿಎಸ್ಟಿ ಅಡಿಯಲ್ಲಿ ರೂ. 76,406 ಕೋಟಿ ತೆರಿಗೆ ಸಂಗ್ರಹ ನಿರೀಕ್ಷೆ ಮಾಡಲಾಗಿದೆ.

---

ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಸದಸ್ಯರುಗಳು, ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳಕ್ಕೆ ನಮ್ಮೆಲ್ಲರನ್ನು ಆಯ್ಕೆ ಮಾಡಿರುವುದಕ್ಕೆ ತಮ್ಮೆಲ್ಲರಿಗೂ ತುಂಬು ಹೃದಯದ ಅಭಿನಂದನೆಗಳು.

### ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ

## ಹಿರಿಯ ಸಹಕಾರಿ ಮುಖಂಡರಾದ ಶ್ರೀ ಎಚ್.ಕೆ. ಪಾಟೀಲರಿಗೆ "ಚೇರ್‌ಮನ್ ಎಮರಿಟಸ್" ಗೌರವ ಸಮರ್ಪಣೆ ; ಶ್ರೀ ಜ್ಯೋತೀಂದ್ರ ಮೆಹ್ತಾ ಅವರು ಅಧ್ಯಕ್ಷರಾಗಿ ಆಯ್ಕೆ

**ಹೊಸದಿಲ್ಲಿ :** ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಕೃಷಿಯೇತರ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ನೂತನ ಆಡಳಿತ ಮಂಡಳಿಯು ರಾಜ್ಯದ ಹಿರಿಯ ಸಹಕಾರಿ ಮುಖಂಡರಾದ ಶ್ರೀ ಎಚ್.ಕೆ. ಪಾಟೀಲರು ಪಟ್ಟಣ ಸಹಕಾರ ಬ್ಯಾಂಕುಗಳ ವಲಯಕ್ಕೆ ಹಾಗೂ ಸಹಕಾರ ಚಳವಳಿಗೆ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಅವರನ್ನು "ಚೇರ್‌ಮನ್ ಎಮರಿಟಸ್" ಎಂಬುದಾಗಿ ಗೌರವಿಸಲು ತೀರ್ಮಾನಿಸಿದೆ.

ಶ್ರೀ ಎಚ್.ಕೆ. ಪಾಟೀಲರು ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾಗಿ ವಿಶೇಷ ಸೇವೆ ಸಲ್ಲಿಸಿದ್ದಾರಲ್ಲದೆ ಪ್ರಸ್ತುತ ಆಡಳಿತ ಮಂಡಳಿ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

2ನೇ ಪುಟಕ್ಕೆ...



2018–19ನೇ ಹಣಕಾಸು ವರ್ಷ : ವರಮಾನ ಖೋತಾ ವಿತ್ತೀಯ ಕೊರತೆ ಹೆಚ್ಚಳ 3
ಬಾಗಲಕೋಟೆಯ ಶ್ರೀ ಬಸವೇಶ್ವರ ಬ್ಯಾಂಕಿನ ಗಜೇಂದ್ರಗಡ ಶಾಖೆಯ ಎ.ಟಿ.ಎಮ್. ಉದ್ಘಾಟನೆ 4
ನಿಮ್ಮ ಪ್ರಶ್ನೆ ನಮ್ಮ ಉತ್ತರ 7




## ಆರ್‌ಬಿಐ ಬಡ್ಡಿ ದರ ಕಡಿತ; ಪರಿಣಾಮಗಳನ್ನು ಕಾದು ನೋಡಬೇಕಿದೆ

ಕಳೆದ ಒಂದೂವರೆ ವರ್ಷಗಳಿಂದಲೂ ಕೇಂದ್ರ ಅರ್ಥ ಸಚಿವರು ರಿಸರ್ವ್ ಬ್ಯಾಂಕಿಗೆ ರೆಪೊ ದರವನ್ನು ಇಳಿಸುವಂತೆ ಮೇಲಿಂದ ಮೇಲೆ ಒತ್ತಡ ಹಾಕುತ್ತಲೇ ಬಂದಿದ್ದರು. ಆದರೆ ಅಂದಿನ ಗವರ್ನರ್ ಉರ್ಜಿತ್ ಪಟೇಲ್ ದೇಶದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರೆಪೊ ದರ ಇಳಿಕೆ ಮಾಡಲು ಒಪ್ಪಿರಲಿಲ್ಲ.

ನಂತರ ಮೀಸಲು ನಿಧಿ ವರ್ಗಾವಣೆ ವಿಚಾರವಾಗಿ ಬಿಕ್ಕಟ್ಟು ಉಂಟಾಗಿತ್ತು. ಕೇಂದ್ರ ಸರ್ಕಾರ ಆರ್.ಬಿ.ಐ.ನಲ್ಲಿರುವ ಸುಮಾರು ರೂ.9.7 ಲಕ್ಷ ಕೋಟಿ ಅಥವಾ ಒಟ್ಟು ಆರ್.ಬಿ.ಐ. ಸಂಪತ್ತಿನ ಶೇ.28ರಷ್ಟು ಮೀಸಲು ನಿಧಿಯ ಪ್ರಮಾಣವನ್ನು ಹೊಸದಾಗಿ ನಿರ್ಧರಿಸಿ, ಹೆಚ್ಚುವರಿ ಹಣವನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸಬೇಕೆಂದು ಎಂದು ಪಟ್ಟು ಹಿಡಿದಿತ್ತು.

ಈ ಎರಡೂ ವಿವಾದಗಳು ಕೇಂದ್ರ ಸರ್ಕಾರ ಮತ್ತು ಆರ್‌ಬಿಐ ನಡುವೆ ಸಂಘರ್ಷಕ್ಕೆ ಎಡೆ ಮಾಡಿತ್ತು. ಫಲವಾಗಿ ಗವರ್ನರ್ ಉರ್ಜಿತ್ ಪಟೇಲ್ ಆರ್‌ಬಿಐ ಗವರ್ನರ್ ಹುದ್ದೆಗೆ ರಾಜಿನಾಮೆ ಸಲ್ಲಿಸಿ ಹೊರ ನಡೆದರು. ಅವರ ನಂತರ ಆರ್‌ಬಿಐ ಗವರ್ನರ್ ಆಗಿ ನೇಮಕವಾಗಿರುವ ಶಕ್ತಿಕಾಂತ್ ದಾಸ್, ಕೇಂದ್ರದ ಮನದಿಚ್ಛೆಯಂತೆ ರೆಪೊ ದರ ಇಳಿಕೆಗೆ ಒಪ್ಪಿದ್ದಾರೆ, ಅಲ್ಪಾವಧಿ ಬಡ್ಡಿ ದರಗಳನ್ನು ಶೇ.0.25ರಷ್ಟು ಕಡಿತ ಮಾಡಿದ್ದಾರೆ. ಈ ಮುಂಚೆ ಇದ್ದ ಶೇ.6.50ರಿಂದ ಶೇ.6.25ಕ್ಕೆ ಇಳಿಕೆ ಮಾಡಿದ್ದಾರೆ. ಹಾಗೂ ಜಾಮೀನು ಮುಕ್ತ ಕೃಷಿ ಸಾಲದ ಮಿತಿಯನ್ನು ರೂ. 1 ಲಕ್ಷದಿಂದ ರೂ. 1.60 ಲಕ್ಷಕ್ಕೆ ಹೆಚ್ಚಿಸಿದ್ದಾರೆ.

ಹೀಗೆ ಅಲ್ಪಾವಧಿ ಬಡ್ಡಿ ದರಗಳಾದ ರೆಪೊ ದರವನ್ನು ಶೇ.6.50 ರಿಂದ ಶೇ 6.25ಕ್ಕೆ ಮತ್ತು ರಿವರ್ಸ್ ರೆಪೊ ದರವನ್ನು ಶೇ 6.25 ರಿಂದ ಶೇ.6ಕ್ಕೆ ಕಡಿತ ಮಾಡಲಾಗಿದೆ. ಇದರಿಂದ ಗ್ರಾಹಕರ ಠೇವಣಿಗಳ ಮೇಲಿನ ಹೆಚ್ಚುವರಿ ವೆಚ್ಚ ಆಧರಿಸಿದ ಬಡ್ಡಿ ದರಗಳನ್ನು (ಎಂಸಿಎಲ್‌ಆರ್) ಬ್ಯಾಂಕುಗಳು ಕಡಿಮೆ ಮಾಡಿದಲ್ಲಿ, ಗೃಹ, ವಾಹನ, ವೈಯಕ್ತಿಕ ಮತ್ತು ಕೈಗಾರಿಕೆಗಳಿಗೆ ವಿತರಿಸುವ ಸಾಲಗಳ ಮೇಲಿನ ಬಡ್ಡಿ ದರವೂ ಅಗ್ಗವಾಗಲಿದೆ. ಬಂಡವಾಳ ಹೂಡಿಕೆ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ. ಸಾಲಗಳ ಮಾಸಿಕ ಕಂತಿನ ಮೊತ್ತದಲ್ಲಿಯೂ ಇಳಿಕೆಯಾಗಲಿದೆ.

ಇನ್ನೊಂದು ಮುಖ್ಯ ಅಂಶ; 2010ರಲ್ಲಿ ನಿಗದಿಪಡಿಸಲಾದ ಮಿತಿಯ ಅನ್ವಯ, ಬ್ಯಾಂಕುಗಳು, ಸಣ್ಣ ರೈತರಿಗೆ ರೂ. 1 ಲಕ್ಷದವರೆಗೆ ಜಾಮೀನು ರಹಿತ ಸಾಲವನ್ನು ಕಡ್ಡಾಯವಾಗಿ ನೀಡಬೇಕಾಗಿತ್ತು. ಈಗ ಜಾಮೀನು ಮುಕ್ತ ಕೃಷಿ ಸಾಲದ ಮಿತಿಯನ್ನು ರೂ. 1 ಲಕ್ಷದಿಂದ ರೂ.1.60 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಇದರಿಂದ ಸಣ್ಣ ಮತ್ತು ಬಡ ರೈತರಿಗೆ ಸಾಲ ಪಡೆಯಲು ಇದು ನೆರವಾಗಲಿದೆ. ಅಲ್ಲದೆ, ಕೃಷಿ ಸಾಲಗಳನ್ನು ಪರಾಮರ್ಶಿಸಲು ಮತ್ತು ಕಾರ್ಯಸಾಧ್ಯವಾದ ಪರಿಹಾರ ಕಂಡುಕೊಳ್ಳಲು ಆಂತರಿಕ ಕಾರ್ಯಪಡೆ ತಂಡ ರಚಿಸಲು ಆರ್‌ಬಿಐ ನಿರ್ಧರಿಸಿದೆ. ಮುಂದಿನ ದಿನಗಳಲ್ಲಿ ಈ ಎಲ್ಲದರ ಪರಿಣಾಮಗಳನ್ನು ಕಾದು ನೋಡಬೇಕಿದೆ.

**ಡಿ.ಟಿ. ಪಾಟೀಲ**
ಅಧ್ಯಕ್ಷರು

**ಬಿ.ಎಸ್. ಪರಮಶಿವಯ್ಯ**
ಉಪಾಧ್ಯಕ್ಷರು

...1ನೇ ಪುಟದಿಂದ

ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಹಾಗೂ ಪತ್ತಿನ ಮಹಾಮಂಡಳದ ಆಡಳಿತ ಮಂಡಳಿ ಚುನಾವಣೆಯೂ ದಿನಾಂಕ : 3.2.2019 ರಂದು ನಡೆಯಿತು. ಇದರಲ್ಲಿ ಶ್ರೀ ಜ್ಯೋತೀಂದ್ರ ಮೆಹ್ತಾರವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಉಪಾಧ್ಯಕ್ಷರಾಗಿ ಶ್ರೀ ಎಸ್.ಕೆ ಶರ್ಮಾ ಮತ್ತು ಶ್ರೀ ವಿ.ವಿ. ಅನಸ್ಕಾರ್‌ರವರು ಆಯ್ಕೆಯಾಗಿದ್ದಾರೆ. ಉಳಿದಂತೆ 9 ಜನ ನಿರ್ದೇಶಕರುಗಳು ರಾಜ್ಯಗಳ ಮಹಾಮಂಡಳದಿಂದ 7 ನಿರ್ದೇಶಕರು ಪಟ್ಟಣ ಸಹಕಾರ ಬ್ಯಾಂಕುಗಳಿಂದ ಹಾಗೂ ಇಬ್ಬರು ನಿರ್ದೇಶಕರು ಪತ್ತಿನ ಸಹಕಾರ ಸಂಘಗಳಿಂದ ಒಬ್ಬರು ಮಹಿಳಾ ಬ್ಯಾಂಕಿನಿಂದ, ಒಬ್ಬರು ರಾಷ್ಟ್ರೀಯ ಸಹಕಾರಿ ಯೂನಿಯನ್‌ನಿಂದ ನಾಮನಿರ್ದೇಶನಗೊಂಡಿದ್ದಾರೆ.

"ಚೇರ್‌ಮನ್ ಎಮರಿಟಸ್" ಗೌರವ ಸ್ವೀಕರಿಸಿ ಮಾತನಾಡಿದ ಸಹಕಾರಿ ಮುಖಂಡರಾದ ಶ್ರೀ ಎಚ್.ಕೆ.ಪಾಟೀಲರು, ಪ್ರಸ್ತುತ ಸಹಕಾರಿ ವಲಯವು ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದು, ಆಡಳಿತಾತ್ಮಕ ವಿಷಯದಲ್ಲಿ ಇನ್ನು ಹೆಚ್ಚಿನ ಅಭಿವೃದ್ಧಿಯತ್ತ ಗಮನ ನೀಡಬೇಕಾಗಿದೆ. ಆದ್ದರಿಂದ ಆಧುನಿಕ ಬದಲಾವಣೆಗಳಿಗೆ ಜನರು ಹೊಂದಿಕೊಂಡು ಸಹಕಾರಿ ವ್ಯವಸ್ಥೆಯನ್ನು ಮತ್ತಷ್ಟು ಬಲಿಷ್ಠಗೊಳಿಸುವತ್ತ ನಾವು ಮುಂದಾಗೋಣ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಜ್ಯೋತೀಂದ್ರ ಮೆಹ್ತಾರವರು ಮಾತನಾಡಿ ದೇಶದಾದ್ಯಂತ 1550 ಪಟ್ಟಣ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದರೂ ಸಹ ಇಂದು ಅವರೆಲ್ಲರೂ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದಲ್ಲಿ ಸದಸ್ಯತ್ವ ಪಡೆದಿಲ್ಲ. ಆದ್ದರಿಂದ ಅವರನ್ನು ಸದಸ್ಯತ್ವ ಪಡೆಯಲು ನಾವು ಪ್ರೇರೇಪಿಸಬೇಕು. ಇನ್ನೂ ಮಹಾಮಂಡಳದ ಪ್ರಮುಖ ಉದ್ದೇಶ ಪಟ್ಟಣ ಸಹಕಾರ ಬ್ಯಾಂಕಿಂಗ್ ವಲಯವನ್ನು ಬಲಪಡಿಸುವುದಾಗಿದ್ದು ಹೆಚ್ಚಿನ ಆಸ್ತೆ ವಹಿಸಲು ಸಲಹೆ ನೀಡಿದ ಅವರು ಮುಂದುವರೆದು ಮಾತನಾಡಿ, ಕಳೆದ 10 ವರ್ಷಗಳಿಂದ ಈ ವಲಯ ಆದಾಯ ತೆರಿಗೆ, ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ (BOM), ಶಾಖಾ ವಿಸ್ತರಣೆ ಇತ್ಯಾದಿ ಸಮಸ್ಯೆಗಳನ್ನು ಎದುರುಸುತ್ತಿದ್ದು, ಇಂತಹ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಹುಡುಕುವಂತೆ ಸೂಚಿಸಿದರು.

ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಕೆ.ಕೆ.ಶರ್ಮಾರವರು ಹಾಗೂ ಶ್ರೀ ವಿದ್ಯಾಧರ ವಿ. ಅನಾಸ್ಕರ್‌ರವರು, ಶ್ರೀ ಎಚ್.ಕೆ.ಪಾಟೀಲ ಹಾಗೂ ಆಡಳಿತ ಮಂಡಳಿ ಸದಸ್ಯರುಗಳಿಗೆ ಅಭಿನಂದಿಸಿ ಧನ್ಯವಾದ ಅರ್ಪಿಸಿದರು.

# ಪರಸ್ಪರ

## ಚಿಂತನ – ಮಂಥನ



## ರಾಜ್ಯದ ಬಜೆಟಿನಲ್ಲಿ ರೈತರು, ಬಡವರು, ಶ್ರಮಿಕ ವರ್ಗಕ್ಕೆ ಹೆಚ್ಚಿನ ಪ್ರಾಧಾನ್ಯತೆ ಅಭಿನಂದನೀಯ

ರಾಜ್ಯ ಸರ್ಕಾರದ 2019–20ರ ಬಜೆಟ್ ಅನ್ನು ಹಣಕಾಸು ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿಗಳು ಮಂಡಿಸಿದ್ದಾರೆ. ಈ ಬಾರಿಯ ಬಜೆಟ್ ಅನ್ನದಾತರ, ಕೆಳ ಮಧ್ಯಮ ವರ್ಗದವರ ಹಾಗೂ ಶ್ರಮಿಕರ ಪಾಲಿಗೆ ಹರ್ಷ ತಂದಿರುವಂತೆ ಕಾಣುತ್ತಿದೆ. ಇದು ಪ್ರಸ್ತುತ ಮೈತ್ರಿ ಸರ್ಕಾರದ 2ನೇ ಬಜೆಟ್ ಆಗಿದೆ.

ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ತಾವು ಹಿಂದೆ ಘೋಷಿಸಿದಂತೆ ಸಂಕಷ್ಟದಲ್ಲಿರುವ ರಾಜ್ಯದ ಕೃಷಿಕರ ಸಾಲಮನ್ನಾಕ್ಕಾಗಿ ಬಜೆಟಿನಲ್ಲಿ ದೊಡ್ಡ ಮೊತ್ತವನ್ನು ಮೀಸಲಾಗಿರಿಸಿದ್ದಾರೆ. ಅದಕ್ಕಾಗಿ ಅವರನ್ನು ಮೊದಲು ಅಭಿನಂದಿಸಬೇಕಿದೆ.

ಅಲ್ಲದೆ, ಸಹಕಾರಿ ಮತ್ತು ಖಾಸಗಿ ಬ್ಯಾಂಕಿನ ಕೃಷಿ ಸಾಲಮನ್ನಾಕ್ಕಾಗಿ ಈ ಆರ್ಥಿಕ ವರ್ಷದಲ್ಲಿ ರೂ.12650 ಕೋಟಿಯನ್ನು ಮುಖ್ಯಮಂತ್ರಿಗಳು ತೆಗೆದಿರಿಸಿದ್ದಾರೆ. ರೈತ ಉಪಕಸುಬಾದ ಪಶುಸಂಗೋಪನೆಗೆ ಅವರು ಭಾರಿ ಉಡುಗೊರೆಯನ್ನೇ ನೀಡಿದ್ದು, ಹಾಲಿನ ಪ್ರೋತ್ಸಾಹ ಧನವನ್ನು ಲೀಟರಿಗೆ 5 ರಿಂದ 6 ರೂಪಾಯಿಗೆ ಏರಿಸಿದ್ದಾರೆ. ಎಲ್ಲಕ್ಕಿಂತಲೂ ನನಗೆ ಸಂತಸ ತಂದಿದ್ದು ಮುಖ್ಯಮಂತ್ರಿಗಳು ಕೃಷಿಗೆ ನೀಡಿರುವ ಮೊದಲ ಆದ್ಯತೆ.

ಈ ಬಾರಿಯ ಬಜೆಟಿನಲ್ಲಿ ಕೃಷಿ ಮತ್ತು ಕೃಷಿ ಸಂಬಂಧಿ ಇಲಾಖೆಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗಿದೆ. ಅದರಲ್ಲೂ ಇಸ್ರೇಲ್ ಕೃಷಿಗೆ ಪ್ರೋತ್ಸಾಹ, ರೈತ ಸಿರಿ ಯೋಜನೆ, ರೈತ ಕಣಜ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡಲಾಗಿದೆ. ರೈತರಿಗೆ ಸಹಕಾರ ಸಂಸ್ಥೆಗಳ ಮೂಲಕ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವುದು, ಭತ್ತ ಬೆಳೆಯುವ ಕರಾವಳಿ ಭಾಗದ ರೈತರಿಗೆ ವಿಶೇಷ ಪ್ಯಾಕೇಜ್, ಹನಿ ನೀರಾವರಿಗೆ ರೂ.368 ಕೋಟಿ ಅನುದಾನವನ್ನು ಮೀಸಲಿಡಲಾಗಿದೆ.

ಸಿರಿಧಾನ್ಯ ಬೆಳೆಗಾರರಿಗೆ ಉತ್ತೇಜನ ನೀಡಲು 'ರೈತಸಿರಿ' ಎಂಬ ಹೊಸ ಯೋಜನೆಯನ್ನು ಸರ್ಕಾರ ಘೋಷಿಸಿದೆ. ಈ ಯೋಜನೆ ಅಡಿ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ. 10 ಸಾವಿರ ನಗದು ಪ್ರೋತ್ಸಾಹ ಧನ ನೀಡಲು ರೂ.10 ಕೋಟಿ ಅನುದಾನ ತೆಗೆದಿಡಲಾಗಿದೆ. ಹಾಗೆಯೇ, ನೀರಾವರಿಗೆ ಬಜೆಟಿನಲ್ಲಿ ಎರಡನೇ ಅತಿಹೆಚ್ಚು ಮೊತ್ತದ ಅಂದರೆ, ರೂ. 17,212 ಕೋಟಿ ಅನುದಾನವನ್ನು ನೀಡಲಾಗಿದೆ. ಸಮಾಧಾನದ ವಿಷಯವೆಂದರೆ, ಮುಖ್ಯಮಂತ್ರಿಗಳು ಯಾವುದೇ ರೀತಿಯ ಹೊಸ ತೆರಿಗೆಗಳನ್ನು ವಿಧಿಸದೆ, ವಿತ್ತಿಯ ಕೊರತೆ ಮೇಲೆ ನಿಗಾ ಕೂಡ ಇರಿಸಿರುವುದು. ಇಲ್ಲಿ ಅಬಕಾರಿ ಸುಂಕ ಏರಿಸಿರುವುದರ ಹೊರತಾಗಿ ಇನ್ನಾವುದೇ ತೆರಿಗೆ ಏರಿಕೆಗಳು ಬಜೆಟಿನಲ್ಲಿ ಇಲ್ಲದಿರುವುದನ್ನು ಗಮನಿಸಬಹುದಾಗಿದೆ.

ನಮ್ಮ ರಾಜ್ಯ ವಿದ್ಯುತ್ ಸಬ್ಸಿಡಿ ಸೇರಿದಂತೆ ರೈತರಿಗೆ ವಿವಿಧ ಬಾಬ್ತುಗಳಲ್ಲಿ ನೀಡುತ್ತಿರುವ ಸೌಲಭ್ಯಗಳನ್ನು ಪರಿಗಣಿಸಿದರೆ, ಅದು ರೂ.17ರಿಂದ ರೂ.18 ಸಾವಿರವಾಗುತ್ತದೆ. ಇದೇ ತೋರುತ್ತದೆ; ಇಡೀ ದೇಶದಲ್ಲಿ ರೈತಸಮುದಾಯಕ್ಕೆ ಅತಿ ಹೆಚ್ಚು ಸೌಲಭ್ಯಗಳನ್ನು ಒದಗಿಸುವ ಹಾಗೂ ಅವರ ಶ್ರೇಯೋಭಿವೃದ್ಧಿಗೆ ಕಾರ್ಯಕ್ರಮಗಳನ್ನು ಜಾರಿಗೊಳಿಸಿರುವ ರಾಜ್ಯವಿದ್ದರೆ ಅದು ಕರ್ನಾಟಕ.

ಒಟ್ಟಾರೆಯಾಗಿ ಈ ಬಾರಿಯ ಬಜೆಟ್ ಅನ್ನು ಗಮನಿಸಿದಲ್ಲಿ ರೈತರು, ಬಡವರು, ಶ್ರಮಿಕ ವರ್ಗಕ್ಕೆ ಮುಖ್ಯಮಂತ್ರಿಗಳು ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದು ಕಾಣುತ್ತದೆ. ಅದಕ್ಕಾಗಿ ಅವರನ್ನು ಅಭಿನಂದಿಸೋಣ.

ಎಚ್.ಕೆ. ಪಾಟೀಲ

## 2018–19ನೇ ಹಣಕಾಸು ವರ್ಷ : ವರಮಾನ ಖೋತಾ ವಿತ್ತೀಯ ಕೊರತೆ ಹೆಚ್ಚಳ



**ನವದೆಹಲಿ :** ಡಿಸೆಂಬರ್ ಅಂತ್ಯಕ್ಕೆ ವಿತ್ತೀಯ ಕೊರತೆಯು ರೂ.7.01 ಲಕ್ಷ ಕೋಟಿಗಳಷ್ಟಾಗಿದೆ. ಇದು, 2018–19ನೇ ಹಣಕಾಸು ವರ್ಷಕ್ಕೆ ಬಜೆಟ್‌ನಲ್ಲಿ ನಿಗದಿ ಮಾಡಿದ್ದ ರೂ.6.24ಲಕ್ಷ ಕೋಟಿಯ ಗುರಿಯ ಶೇ.112.4ರಷ್ಟಾಗಿದೆ.

ವರಮಾನ ಸಂಗ್ರಹ ಕಡಿಮೆಯಾಗಿರುವುದೇ ಇದಕ್ಕೆ ಕಾರಣ ಎಂದು ಕೇಂದ್ರ ಸರ್ಕಾರ ಸೋಮವಾರ ಬಿಡುಗಡೆ ಮಾಡಿದ ಅಂಕಿ ಅಂಶಗಳು ತಿಳಿಸಿವೆ. ಸರ್ಕಾರದ ವೆಚ್ಚ ಮತ್ತು ವರಮಾನ ನಡುವಣ ವ್ಯತ್ಯಾಸವಾಗಿರುವ ವಿತ್ತೀಯ ಕೊರತೆಯು 2017ರ ಡಿಸೆಂಬರ್‌ನಲ್ಲಿ ಬಜೆಟ್ ಅಂದಾಜಿನ ಶೇ.113.6ರಷ್ಟಾಗಿತ್ತು. ಪ್ರಸಕ್ತ ವರ್ಷಕ್ಕೆ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ.3.3ಕ್ಕೆ (ರೂ.6.24ಲಕ್ಷ ಕೋಟಿ) ನಿಗದಿಪಡಿಸಲು ಸರ್ಕಾರ ಉದ್ದೇಶಿಸಿತ್ತು. ಹಿಂದಿನ ಹಣಕಾಸು ವರ್ಷದಲ್ಲಿ ಇದು ಶೇ.3.53ರಷ್ಟಿತ್ತು.

2019–20ರ ಹಣಕಾಸು ವರ್ಷದ ಮಧ್ಯಂತರ ಬಜೆಟ್‌ನಲ್ಲಿ ಇದನ್ನು ಪರಿಷ್ಕರಿಸಿ ಶೇ.3.4ಕ್ಕೆ (ರೂ.6.34ಲಕ್ಷ ಕೋಟಿ) ನಿಗದಿಪಡಿಸಲಾಗಿದೆ. ಸಣ್ಣ ರೈತರ ಆದಾಯ ಯೋಜನೆಗೆ ರೂ.20 ಸಾವಿರ ಕೋಟಿ ತೆಗೆದು ಇರಿಸಿರುವುದರಿಂದ ವಿತ್ತೀಯ ಕೊರತೆ ಹೆಚ್ಚಳವಾಗಿದೆ.

ಮಹಾಲೇಖಪಾಲರು ಬಿಡುಗಡೆ ಮಾಡಿರುವ ದತ್ತಾಂಶದ ಪ್ರಕಾರ, ಡಿಸೆಂಬರ್ ವೇಳೆಗೆ ಸರ್ಕಾರದ ಬೊಕ್ಕಸಕ್ಕೆ ಹರಿದು ಬಂದಿರುವ ವರಮಾನವು ರೂ.10.84ಲಕ್ಷ ಕೋಟಿಗಳಷ್ಟಿದೆ. ಇದು ಬಜೆಟ್ ಅಂದಾಜಿನ ಶೇ.62.8ರಷ್ಟಿದೆ.

ಸಣ್ಣ ಉಳಿತಾಯದ ಅವಲಂಬನೆ: ಸರ್ಕಾರವು ತನ್ನ ವಿತ್ತೀಯ ಕೊರತೆ ತುಂಬಿಕೊಳ್ಳಲು ಸಣ್ಣ ಉಳಿತಾಯದ ರೂ.1.25ಲಕ್ಷ ಕೋಟಿಯನ್ನು ನೆಚ್ಚಿಕೊಳ್ಳಲಿದೆ. ಸಣ್ಣ ಉಳಿತಾಯ ರೂಪದಲ್ಲಿ ಸಂಗ್ರಹವಾಗುವ ಮೊತ್ತವನ್ನು ಸಾಲ ಮರುಪಾವತಿಗೆ ಬಳಸುವ ಬದಲಿಗೆ ಹೂಡಿಕೆಗೆ ಬಳಸುವ ಸಾಧ್ಯತೆ ಇದೆ ಎಂದು ಪರಿಣತರು ಹೇಳಿದ್ದಾರೆ. ಹೂಡಿಕೆಯಿಂದ ಉಳಿಯುವ ಮೊತ್ತವನ್ನು ಸಾಲ ಮರುಪಾವತಿಗೆ ಬಳಕೆ ಮಾಡಲಾಗುವುದು ಎಂದು ಸರ್ಕಾರ ತಿಳಿಸಿದೆ.

# ಬಾಗಲಕೋಟೆಯ ಶ್ರೀ ಬಸವೇಶ್ವರ ಬ್ಯಾಂಕಿನ ಗಜೇಂದ್ರಗಡ ಶಾಖೆಯ ಎ.ಟಿ.ಎಮ್. ಉದ್ಘಾಟನೆ



ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕಿನ ಗಜೇಂದ್ರಗಡ ಶಾಖೆಯ ಎ.ಟಿ.ಎಮ್. ಸೇವೆಯನ್ನು ದಿನಾಂಕ : 31-01-2019 ರಿಂದ ಸಾರ್ವಜನಿಕರ ಸೇವೆಗೆ ಸಮರ್ಪಿಸಲಾಯಿತು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಪ್ರಕಾಶ ತಪಶೆಟ್ಟಿಯವರು, ಬ್ಯಾಂಕಿನ ಎ.ಟಿ.ಎಮ್. ಉದ್ಘಾಟಿಸಿ ಮಾತನಾಡುತ್ತ, ಸಹಕಾರಿ ತತ್ವದ ತಳಹದಿ ಮೇಲೆ ಹೆಮ್ಮರವಾಗಿ ಬೆಳೆದಿರುವ ಪ್ರತಿಷ್ಠಿತ ನಮ್ಮ ಬ್ಯಾಂಕು, ಎಲ್ಲ ಗ್ರಾಹಕರಿಗೂ ಪ್ರಯೋಜನವಾಗಲಿದೆ. ಬ್ಯಾಂಕು ಎ.ಟಿ.ಎಮ್. ಸೇವೆ, ಮೊಬೈಲ್ ಬ್ಯಾಂಕಿಂಗ್ ಸೇವೆ, ಆರ್.ಟಿ.ಜಿ.ಎಸ್., ಎಸ್.ಎಮ್.ಎಸ್, ಸಿಟಿಎಸ್-2010 ಮುಂತಾದ ಅತ್ಯಾಧುನಿಕ ಸೇವೆಗಳನ್ನು ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಮೊದಲನೆಯದಾಗಿ ಪ್ರಾರಂಭಿಸಿರುವುದಕ್ಕೆ ಹೆಮ್ಮೆ ಅನಿಸುತ್ತದೆ.

ಎ.ಟಿ.ಎಮ್. ಉದ್ಘಾಟಿಸಿದ ಜೈನ್ ಸಮುದಾಯದ ಅಧ್ಯಕ್ಷ, ಅಶೋಕಕುಮಾರ ಬಾಗಮಾರ ಮಾತನಾಡುತ್ತಾ, ಬಸವೇಶ್ವರ ಸಹಕಾರಿ ಬ್ಯಾಂಕಿನ ಪ್ರಗತಿ ಅತ್ಯಂತ ಶ್ಲಾಘನೀಯ. ನಮ್ಮ ಸಹಾಯ-ಸಹಕಾರ ಸದಾ ಇರುವುದು ಎಂದು ಹೇಳಿದರು. ಶಾಖಾ ಮಾರ್ಗದರ್ಶಕರಾದ ವೀರೇಶ ನಂದಿಹಾಳ, ಡಾ. ಬಿ.ವ್ಹಿ. ಕಂಬಳಿಹಾಳ, ಸಂಗಮೇಶ ಚಟ್ಟೇರ, ಶರಣಬಸಪ್ಪ ಮೆಣಸಿನಕಾಯಿ, ಶೇಖಪ್ಪ ಚೋಳಿನ, ಬಸವರಾಜ ಕೊಟಗಿ, ಮಲ್ಲಿಕಾರ್ಜುನಗೌಡ ಮಲ್ಲನಗೌಡ್ರ, ಬಸೆಟ್ಟೆಪ್ಪ ಶಿರೂರ, ಅನ್ನದಾನೇಶ್ವರ ಕೋರಿ, ಈರಪ್ಪ ಮೋಹಿತೆ, ಶ್ರೀಮತಿ ಲೀಲಾವತಿ ವನ್ನಾಲ, ಶ್ರೀಮತಿ ರಾಜೇಶ್ವರಿ ಅಂಗಡಿ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಎಮ್.ಜಿ. ವಾಲಿ ಹಾಗೂ ಆಡಳಿತ ಮಂಡಳಿಯ ಸದಸ್ಯರು ಪ್ರಧಾನ ವ್ಯವಸ್ಥಾಪಕ ಬಿ.ಪಿ. ಬಣಗಾರ, ಮತ್ತು ಸಲಹೆಗಾರರಾದ ಬಿ.ಎಸ್. ನಾವಲಗಿ, ಪಿ.ಎನ್. ಹಳ್ಳಿಕೇರಿ, ಅಧಿಕಾರಿಗಳಾದ ವ್ಹಿ.ಎಮ್. ಹಿರೇಮಠ. ಕೆ.ಎಲ್. ಲೆಂಕೆಪ್ಪನವರ ಹಾಗೂ ಸಿಬ್ಬಂದಿ ವರ್ಗ, ನಗರದ ಗಣ್ಯ ವ್ಯಾಪಾರಸ್ಥರು ಉಪಸ್ಥಿತರಿದ್ದರು. ಶಾಖಾ ವ್ಯವಸ್ಥಾಪಕ ರಮೇಶ ಅಂಗಡಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕ ನಿ., ಬಾಗಲಕೋಟ : ಬೀದಿ ವ್ಯಾಪಾರಿಗಳಿಗೆ ಬಡ್ಡಿರಹಿತ ಸಾಲ

ಕರ್ನಾಟಕ ಸರ್ಕಾರ ಬಡವರ ಬಂಧು ಯೋಜನೆ ಅಡಿಯಲ್ಲಿ ತೃತೀಯ ವೇಳೆ ದಿನಾಂಕ : 30.01.2019ರ ಬುಧವಾರ ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಪ್ರಕಾಶ ಈ. ತಪಶೆಟ್ಟಿ ಇವರು ಆಯ್ಕೆ ಆದ ಅತಿ ಚಿಕ್ಕ 22 ಫಲಾನುಭವಿಗಳಿಗೆ, ಬಡ್ಡಿ ರಹಿತ ಸಾಲ ಬಟವಡೆ ಮಾಡಿದರು.




ಸಾಲವನ್ನು ಮಂಜೂರಾದ ಉದ್ದೇಶಕ್ಕೆ ಉಪಯೋಗಿಸಿಕೊಂಡು ತಮ್ಮ ವ್ಯಾಪಾರವನ್ನು ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಂಡು ಸರ್ಕಾರದ ಯೋಜನೆಯನ್ನು ಯಶಸ್ವಿಗೊಳಿಸಬೇಕು ಅಂತಾ ಫಲಾನುಭವಿಗಳಿಗೆ ತಿಳಿಸಿದರು. ಸಾಲ ಅವಶ್ಯಕತೆ ಇರುವ ಆಸಕ್ತ ಫಲಾನುಭವಿಗಳಿಗೆ ಬಡ್ಡಿರಹಿತ ಸಾಲ ಕೊಡಲಾಗುವುದು. ಕಾರಣ ನಮ್ಮ ಬ್ಯಾಂಕಿನ ಬಾಗಲಕೋಟ ಶಾಖೆಯ ವ್ಯವಸ್ಥಾಪಕರು / ಪಿಗ್ಮಿ ಏಜೆಂಟರನ್ನು ಸಂಪರ್ಕಿಸಲು ತಿಳಿಸಿದರು.

ಬಡ್ಡಿರಹಿತ ಸಾಲ ನೀಡಿದ್ದಕ್ಕೆ ತಮ್ಮ ಆರ್ಥಿಕ ಪರಿಸ್ಥಿತಿ ಹಾಗೂ ವ್ಯಾಪಾರ ಅಭಿವೃದ್ಧಿಗೆ ಸಹಾಯವಾಗುತ್ತದೆ ಅಂತಾ 1) ಶ್ರೀಮತಿ ಗೀತಾ ಹೊಸೂರ 2) ಇರ್ಫಾನ ಕೋಲಾಪೂರ 3) ಸಾಬಣ್ಣ ಗುಡೂರ 4) ಆಂಜನೇಯ ಕಾಗಿ ಅಭಿಪ್ರಾಯ ಪಡಿಸಿದರು.

ಸಾಲ ಬಟವಡೆಯಲ್ಲಿ ಬಸವರಾಜ ಬಣಗಾರ ಪ್ರಧಾನ ವ್ಯವಸ್ಥಾಪಕರು, ಸಲಹೆಗಾರರಾದ ಬಸವರಾಜ ನಾವಲಗಿ, ಪರಶುರಾಮ ಹಳ್ಳಿಕೇರಿ, ಬಸವರಾಜ ಯರನಾಳ ಸಿಬ್ಬಂದಿವರ್ಗ ಉಪಸ್ಥಿತರಿದ್ದರು.

# ಕರ್ನಾಟಕದಿಂದ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಹಕಾರ ಸಂಘಗಳ ಮಹಾಮಂಡಳಕ್ಕೆ ನಿರ್ದೇಶಕರಾಗಿ ಆಯ್ಕೆ



ಶ್ರೀ ಎಚ್.ಕೆ. ಪಾಟೀಲ



ಶ್ರೀ ಎ.ಎಂ. ಹಿಂಡಸಗೇರಿ



ಶ್ರೀ ಕೆ. ಕಾಳಪ್ಪ

ನವದೆಹಲಿಯ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಆಡಳಿತ ಮಂಡಳಿಯ ಚುನಾವಣೆಯು ದಿನಾಂಕ : 03.02.2019ರಂದು ಜರುಗಿತು. ಶ್ರೀ ಎಚ್.ಕೆ. ಪಾಟೀಲರವರು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ವತಿಯಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿನ ಪಟ್ಟಣ ಸಹಕಾರ ಬ್ಯಾಂಕುಗಳ ಕ್ಷೇತ್ರದಿಂದ ಹುಬ್ಬಳ್ಳಿಯ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಎ.ಎಂ.ಹಿಂಡಸಗೇರಿಯವರು ಮತ್ತು ಗಂಗಾವತಿಯ ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಸಹಕಾರ ಬ್ಯಾಂಕಿನ ನಿರ್ದೇಶಕರಾದ ಶ್ರೀ ಕೆ. ಕಾಳಪ್ಪರವರು ಚುನಾಯಿತರಾಗಿರುತ್ತಾರೆ.

# ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಆಡಳಿತ ಮಂಡಳಿಗೆ ಆಯ್ಕೆ

**ನವದೆಹಲಿ :** ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಆಡಳಿತ ಮಂಡಳಿಯ ಚುನಾವಣೆಯು ದಿನಾಂಕ : 03.02.2019ರಂದು ಜರುಗಿತು.

ಆಡಳಿತ ಮಂಡಳಿ ನಿರ್ದೇಶಕರುಗಳಾಗಿ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲ, ಗುಜರಾತ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಜ್ಯೋತೀಂದ್ರ ಎಂ. ಮೆಹತಾ, ಮಹಾರಾಷ್ಟ್ರ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ವಿದ್ಯಾಧರ ವಿ. ಅನಾಸ್ಕರ್, ಪಂಜಾಬ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಕೆ.ಕೆ. ಶರ್ಮಾ, ರಾಷ್ಟ್ರೀಯ ಸಹಕಾರ ಯೂನಿಯನ್‌ನ ಅಧ್ಯಕ್ಷರಾದ ಡಾ॥ ಚಂದ್ರಪಾಲ್ ಸಿಂಗ್ ಯಾದವ, ದೆಹಲಿ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಲಕ್ಷ್ಮೀ ದಾಸ್, ಕೇರಳ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಡಿವಿ. ಕೆ. ಜಯವರ್ಮಾ, ತೆಲಂಗಾಣ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ವೇಮಿರೆಡ್ಡಿ ನರಸಿಂಹರೆಡ್ಡಿ, ಉತ್ತರಪ್ರದೇಶ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮತ್ತು ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ರಾಮಬಾಬು ಶ್ಯಾಂಡಿಲ್ಯ, ಉತ್ತರ ಭಾರತ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಮುದಿತ್ ವರ್ಮಾ, ಹುಬ್ಬಳ್ಳಿಯ ಅರ್ಬಾದ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಎ.ಎಂ.ಹಿಂಡಸಗೇರಿ, ತೆಲಂಗಾಣ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಶ್ರೀ ಜಿ. ರಾಮಮೂರ್ತಿ, ಗ್ವಾಲಿಯರ್‌ನ ಲಕ್ಷ್ಮೀಬಾಯಿ ಮಹಿಳಾ ನಾಗರೀಕ ಸಹಕಾರಿ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀಮತಿ ಅಲಕಾ ಶ್ರೀವಾಸ್ತವ, ಗಂಗಾವತಿಯ ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಪಟ್ಟಣ ಸಹಕಾರ ಬ್ಯಾಂಕಿನ ನಿರ್ದೇಶಕರಾದ ಶ್ರೀ ಕೆ. ಕಾಳಪ್ಪ, ಬಾರ್ಡೋಲಿ ನಾಗರಿಕ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಗೌತಮಬಾಯ್ ವ್ಯಾಸ್, ಮುಂಬಯಿನ ಅಪನಾ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ದತ್ತಾರಾಮ ಅನಂತ ಚಳ್ಕೆ, ನಾಗ್ಪುರ ನಾಗರೀಕ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸಂಜಯ ನಾಥೂಜಿ ಬೆಂಡೆ, ಪಶ್ಚಿಮ ಬಂಗಾಳ ರಾಣಿಗಂಜಿ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಗೋಪಾಲ ಚಂದ್ರ ಆಚಾರಜಿ, ಗುಜರಾತನ ಖೊಡಿಯಾರ ಕೋ–ಆಪರೇಟಿವ್ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಕಾಂತಿಬಾಯ್ ಲಾಜಿದಾಸ್ ಪಟೇಲ್, ಅಲಿಬಾಗನ ಶ್ರೀಕೃಪಾ ನಾಗರಿಕ ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ಶ್ರೀ ಉದಯ ವಾಸುದೇವ ಜೋಶಿರವರುಗಳು ಆಯ್ಕೆಯಾಗಿರುತ್ತಾರೆ. ಶ್ರೀ ನರಂದಾಸ್ ವಿ. ಪಟೇಲ್ ನಾಮನಿರ್ದೇಶನಗೊಂಡಿರುತ್ತಾರೆ ಎಂದು ರಾಷ್ಟ್ರೀಯ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಸುಭಾಷ ಗುಪ್ತಾರವರು ತಿಳಿಸಿರುತ್ತಾರೆ.

# ಗದುಗಿನ ಮರ್ಚಂಟ್ಸ ಲಿಬರಲ್ ಕೋ-ಆಪ್ ಬ್ಯಾಂಕ್ : ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಿರೋಧ ಆಯ್ಕೆ



ಶ್ರೀ ಮೋಹನ ಟಿ. ಕೋಟಿ
ಅಧ್ಯಕ್ಷರು



ಶ್ರೀ ಶರಣಬಸಪ್ಪ ಕೆ. ಕುರಡಗಿ
ಉಪಾಧ್ಯಕ್ಷರು

**ನೂತನ ಆಡಳಿತ ಮಂಡಳಿ**

* ಮೋಹನ ಟಿ. ಕೋಟಿ, * ಶರಣಬಸಪ್ಪ ಕೆ. ಕುರಡಗಿ,
* ಶಿವಪ್ಪ ವ್ಹಿ. ಇಟಗಿ, * ವಿಶ್ವನಾಥ ಸಿ. ರಾಮನಕೊಪ್ಪ,
* ತೋಟೋಸಾ ಆರ್. ಭಾಂಡಗೆ
* ಮಹಾದೇವಯ್ಯ ಸಿ. ಧನ್ನೂರಹಿರೇಮಠ,
* ಕುಬೇರಗೌಡ ಎಸ್. ಪರ್ವತಗೌಡ್ರ, * ಸಂತೋಷ ಬಿ. ಅಬ್ಬಿಗೇರಿ,
* ಪಂಚಣ್ಣ ಸಿ. ಕತ್ತಿ, * ಚಂದ್ರಕಾಂತ ಎಸ್. ಸಂಕಣ್ಣವರ,
* ಬೈಲಪ್ಪ ಟಿ. ಆಸಂಗಿ, *ಶಿವಾನಂದ ಎಚ್. ನಡವಲಗುಡ್ಡ,
* ಶ್ರೀಮತಿ ಸುಮಂಗಲಾ ಎನ್. ಹೊಸಮನಿ,
* ಶ್ರೀಮತಿ ಶಿವವ್ವ ಕೆ. ಕುರಡಗಿ.

ಗದಗ ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲಿ ಒಂದಾದ ಮರ್ಚಂಟ್ಸ ಲಿಬರಲ್ ಕೋ–ಆಪರೇಟಿವ್ ಬ್ಯಾಂಕಿನ ಸನ್ 2018–19 ರಿಂದ ಮುಂದಿನ 5 ವರ್ಷ ಅವಧಿಗಾಗಿ ಪದಾಧಿಕಾರಿಗಳ ಚುನಾವಣೆಯು ದಿನಾಂಕ 06.02.2019 ರಂದು ಬ್ಯಾಂಕಿನ ಪ್ರಧಾನ ಕಚೇರಿಯಲ್ಲಿ ನಡೆಯಿತು. ನೂತನ ಅಧ್ಯಕ್ಷರಾಗಿ ಶ್ರೀಮೋಹನ ಟಿ. ಕೋಟಿ ಮತ್ತು ಉಪಾಧ್ಯಕ್ಷರಾಗಿ ಶ್ರೀಶರಣಬಸಪ್ಪ ಕೆ. ಕುರಡಗಿ ಅವಿರೋಧವಾಗಿ ಆಯ್ಕೆಗೊಂಡಿರುತ್ತಾರೆಂದು ಬ್ಯಾಂಕಿನ ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಗದಗ ಉಪವಿಭಾಗ ಗದಗ ರವರಾದ ಶ್ರೀ ಎಮ್.ಎಸ್. ಯರಗಲ್ ರವರು ಘೋಷಿಸಿದರು.

ಚುನಾವಣಾಧಿಕಾರಿಗಳು ನೂತನ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳನ್ನು ಉದ್ದೇಶಿಸಿ ಮಾತನಾಡುತ್ತ, ಬ್ಯಾಂಕು ಸಾಧಿಸಿದ್ದು ಕಡಿಮೆ ಇದ್ದು ಸಾಧಿಸಬೇಕಾಗಿರುವುದು ಇನ್ನು ಬಹಳ ಇದೆ. ಕಾರಣ ಒಂದೇ ನಾಣ್ಯದ ಎರಡು ಮುಖಗಳಂತೆ ಇರುವ ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳು ಉತ್ತಮವಾದ ಹೊಂದಾಣಿಕೆಯ ಮೂಲಕ ಇಂದಿನ ಸ್ಪರ್ಧಾತ್ಮಕ ಹಾಗೂ ಆಧುನಿಕ ಬ್ಯಾಂಕಿಂಗ ವಲಯದಲ್ಲಿರುವ ಸವಾಲುಗಳನ್ನು ಮೆಟ್ಟಿ ನಿಂತು ಯಶಸ್ವಿ ಹಾಗೂ ಮಾದರಿ ಸಹಕಾರಿ ಬ್ಯಾಂಕ ಆಗಿ ಬೆಳೆಯಲಿ ಎಂದು ಶುಭ ಹಾರೈಸಿದರು.

ನೂತನ ಅಧ್ಯಕ್ಷರಾದ ಶ್ರೀ ಮೋಹನ ಟಿ. ಕೋಟಿ ಅವರು ಬ್ಯಾಂಕಿನ ಸಂಸ್ಥಾಪಕರಾದ ಲಿಂ. ಶ್ರೀ ಚನಬಸಪ್ಪ ವ್ಹಿ. ಕತ್ತಿ, ಮುಖ್ಯ ಪ್ರವರ್ತಕ ಲಿಂ. ಶ್ರೀ ಬಸವಣ್ಣೆಪ್ಪ ಜಿ. ಅಂಗಡಿ ಹಾಗೂ ಬ್ಯಾಂಕಿನ ಅಭಿವೃದ್ಧಿಗೆ ಶ್ರಮಿಸಿದ ಹಾಗೂ ಮಾಜಿ ಅಧ್ಯಕ್ಷರಾದ ಲಿಂ. ಶ್ರೀ ಎಸ್.ಬಿ. ಸಂಕಣ್ಣವರನ್ನು ಸ್ಮರಿಸಿ ಮಾತನಾಡುತ್ತಾ ಬ್ಯಾಂಕಿನ ಎಲ್ಲ ಗೌರವವಾನ್ವಿತ ಶೇರುದಾರರು ಆಡಳಿತ ಮಂಡಳಿಯ ಮೇಲೆ ವಿಶ್ವಾಸವಿಟ್ಟು ಅವಿರೋಧವಾಗಿ ಆಯ್ಕೆ ಮಾಡಿರುತ್ತಾರೆ. ಕಾರಣ ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳು ಹೆಚ್ಚಿನ ಮುತುವರ್ಜಿ ವಹಿಸಿ ಕಾರ್ಯನಿರ್ವಹಿಸಿ ಬ್ಯಾಂಕನ್ನು ಅಭಿವೃದ್ಧಿಯ ಪಥದಲ್ಲಿ ನಡೆಸೋಣ ಎಂದು ಹೇಳಿದರು.

ನೂತನ ಉಪಾಧ್ಯಕ್ಷರಾದ ಶ್ರೀ ಶರಣಬಸಪ್ಪ ಕೆ. ಕುರಡಗಿ ಅವರು ಮಾತನಾಡುತ್ತಾ ಬ್ಯಾಂಕಿನ ಅಭಿವೃದ್ಧಿಗೆ ಎಲ್ಲ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳು ಶ್ರಮಿಸೋಣ ಎಂದು ಹೇಳಿದರು. ಅದೇ ರೀತಿಯಾಗಿ ಬ್ಯಾಂಕಿನ ಹಿರಿಯ ನಿರ್ದೇಶಕರಾದ ಶ್ರೀ ಶಿವಪ್ಪ ವ್ಹಿ. ಇಟಗಿ ಅವರು ಮಾತನಾಡುತ್ತಾ ಬ್ಯಾಂಕಿನ ಚುನಾವಣಾ ಪ್ರಕ್ರಿಯೆಯು ಯಶಸ್ವಿಯಾಗಿ ಜರುಗಿದ್ದಕ್ಕೆ ಬ್ಯಾಂಕಿನ ಸದಸ್ಯರಿಗೆ, ಚುನಾವಣಾ ಅಧಿಕಾರಿಗಳಿಗೆ ಹಾಗೂ ಬ್ಯಾಂಕಿನ ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ತಿಳಿಸಿದರು.

ಇನ್ನೋರ್ವ ಹಿರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ ಸಿ. ರಾಮನಕೊಪ್ಪ ರವರು ಮಾತನಾಡುತ್ತ ನೂತನ ಅಧ್ಯಕರು ಹಾಗೂ ಉಪಾಧ್ಯಕ್ಷರಿಗೆ ಹಾರ್ದಿಕ ಶುಭಾಶಯಗಳನ್ನು ತಿಳಿಸುತ್ತಾ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿ ಅವುಗಳನ್ನು ಕಾರ್ಯಗತಗೊಳಿಸುವುದರ ಮೂಲಕ ಬ್ಯಾಂಕನ್ನು ಅಭಿವೃದ್ಧಿಗೊಳಿಸೋಣ ಎಂದು ಹೇಳಿದರು. ನಂತರ ನಿರ್ದೇಶಕರಾದ ಶ್ರೀ ತೋಟೋಸಾ ಆರ್. ಭಾಂಡಗೆ ಅವರು ಮಾತನಾಡುತ್ತ ಚುನಾವಣಾ ಅಧಿಕಾರಿಗಳಿಗೆ ಕೃತಜ್ಞತೆಗಳನ್ನು ತಿಳಿಸಿದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಜು ಎಲ್. ಕೋಟಿ ಅವರು ಮಾತನಾಡುತ್ತಾ ಚುನಾವಣಾ ಪ್ರಕ್ರಿಯಗಳನ್ನು ಯಶಸ್ವಿಯಾಗಿ ಹಾಗೂ ಶಾಂತಿಯುತವಾಗಿ ನಡೆಯಲು ಸಹಕರಿಸಿದ ಶೇರುದಾರರಿಗೆ, ಚುನಾವಣಾ ಅಧಿಕಾರಿಗಳಾದ ಶ್ರೀ ಎಮ್.ಎಸ್. ಯರಗಲ್, ಉಪಚುನಾವಣಾ ಅಧಿಕಾರಿಗಳಾದ ಶ್ರೀ ಪ್ರಶಾಂತ ಜಿ. ಮುಧೋಳ ಮತ್ತು ಪರಿಶೀಲನಾಧಿಕಾರಿಗಳಾದ ಶ್ರೀ ಶಕ್ತಿಪ್ರಸಾದ ಎಸ್. ಜಂಬಗಿ, ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ತಿಳಿಸಿದರು.

ಶಾಖಾ ವ್ಯವಸ್ಥಾಪಕರಾದ ಶ್ರೀ ಮೋಹನ ಕೆ. ಹೊನಗುಡಿ, ಶ್ರೀಮತಿ ಮಾಲಾ ಬಿ. ಹೊಸಮನಿ, ಶ್ರೀ ಮಂಜನಾಥ ಎ. ಸಂಕಣ್ಣವರ, ಶ್ರೀ ಅಶೋಕ ವಾಯ್. ಆಸಂಗಿ, ಶ್ರೀಮತಿ ದೀಪಾ ಬಿ. ಇಂಡಿ, ಸಿಬ್ಬಂದಿ ವರ್ಗ ಹಾಗೂ ಪಿಗ್ಮಿ ಸಂಗ್ರಹಕಾರರು ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▶▶ **ಸುಧಾಕರ್ ಭಟ್**, ಬ್ಯಾಂಕಿಂಗ್ ಸಲಹೆಗಾರರು.

**1. ನಮ್ಮ ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರ ಚುನಾವಣೆ ಫೆಬ್ರವರಿ 2020ರಲ್ಲಿದೆ. ನಮ್ಮ ಹೆಚ್ಚಿನ ಸದಸ್ಯರು ಹಳ್ಳಿ ಪ್ರದೇಶದಲ್ಲಿರುವುದರಿಂದ ಅವರಿಗೆ ಮಹಾಸಭೆಗೆ ಹಾಜರಾಗಲು ಮತ್ತು ಕನಿಷ್ಠ ಸೇವೆಗಳನ್ನು ಬಳಸಿಕೊಳ್ಳಲು ಕಷ್ಟವಾಗುತ್ತಿದೆ. ಇತ್ತೀಚಿನ ಗೌರವ ಉಚ್ಚನ್ಯಾಯಾಲಯದ ಆದೇಶದಂತೆ ಸದಸ್ಯರು ಮತದಾನದ ಹಕ್ಕನ್ನು ಪಡೆಯಲು ಮಹಾಸಭೆಗೆ ಹಾಜರಾತಿ ಮತ್ತು ಕನಿಷ್ಠ ಸೇವೆಗಳ ಬಳಕೆ ಕಡ್ಡಾಯವಲ್ಲವೆಂದು ತಿಳಿದುಬಂದಿದೆ. ಈ ಆದೇಶ 2020ರಲ್ಲಿ ನಡೆಯುವ ನಮ್ಮ ಚುನಾವಣೆಗೂ ಅನ್ವಯವಾಗುತ್ತದೆಯೇ, ಇಲ್ಲವಾದರೆ, ಸಮಸ್ಯೆಗೆ ಏನಾದರೂ ಪರಿಹಾರವಿದೆಯೇ?**

**– ಖಾನಾಪುರ ಕೋ–ಆಪರೇಟಿವ್ ಬ್ಯಾಂಕ್ ಲಿ., ಖಾನಾಪುರ.**

**ಉತ್ತರ :** ಗೌರವ ಕರ್ನಾಟಕ ಉಚ್ಚನ್ಯಾಯಾಲಯ ನೀಡಿದ ಸ್ಪಷ್ಟೀಕರಣದ ಆಧಾರದ ಮೇಲೆ ಸಹಕಾರ ಚುನಾವಣಾ ಪ್ರಾಧಿಕಾರವು ತನ್ನ ದಿನಾಂಕ : 19.01.2019ರ ಸುತ್ತೋಲೆಯಲ್ಲಿ ಎಲ್ಲಾ ಸಹಕಾರ ಸಂಘಗಳು 2019ರ ಅಂತ್ಯದವರೆಗೆ ನಡೆಯುವ ತಮ್ಮ ಮಂಡಳಿ ಸದಸ್ಯರ ಚುನಾವಣೆಯಲ್ಲಿ ಸದಸ್ಯರು ಬಳಸಿಕೊಂಡ ಕನಿಷ್ಠ ಸೇವೆ ಮತ್ತು ಅವರ ಮಹಾಸಭೆಗೆ ಹಾಜರಾತಿಯನ್ನು ಗಣನೆಗೆ ತೆಗೆದುಕೊಳ್ಳದೆ ಅವರಿಗೆ ಮತದಾನದ ಹಕ್ಕನ್ನು ನೀಡಬಹುದೆಂದು ಆದೇಶ ನೀಡಿದೆ. ಆದರೆ, ದಿನಾಂಕ:05.02.2019ರ ತನ್ನ ಸುತ್ತೋಲೆಯಲ್ಲಿ ಚುನಾವಣಾ ಪ್ರಾಧಿಕಾರವು, ಗೌರವ ಉಚ್ಚನ್ಯಾಯಾಲಯವು ತನ್ನ ಆದೇಶಕ್ಕೆ ದಿನಾಂಕ:4.02.2019ರಂದು ತಡೆಯಾಜ್ಞೆ ನೀಡಿರುವುದರಿಂದ ತನ್ನ ದಿನಾಂಕ:19.01.2019 ಸ್ಪಷ್ಟೀಕರಣವನ್ನು ಹಿಂಪಡೆಯಲಾಗಿದೆಯೆಂದು ತಿಳಿಸಿದೆ. ಕಾಯ್ದೆ ತಿದ್ದುಪಡಿಯಾದ ದಿನಾಂಕ:(11.02.2013)ದ ನಂತರ ನಡೆದ ಮೊದಲ ಚುನಾವಣೆಗೆ ಮಾತ್ರ ಸದಸ್ಯರಿಗೆ ಮಹಾಸಭೆಗೆ ಹಾಜರಾತಿ ಮತ್ತು ಕನಿಷ್ಠ ಸೇವೆಗಳ ಬಳಕೆಯಿಂದ ವಿನಾಯಿತಿ ಇರುತ್ತದೆಯೆಂದು ಸ್ಪಷ್ಟೀಕರಣ ನೀಡಿದೆ. ಇದರ ಪರಿಣಾಮವಾಗಿ ಇನ್ನು ಮುಂದೆ ನಡೆಯುವ ಎಲ್ಲಾ ಚುನಾವಣೆಗಳಲ್ಲಿ ಸದಸ್ಯರು ಮತದಾನದ ಹಕ್ಕನ್ನು ಪಡೆಯಲು ಬ್ಯಾಂಕಿನ ಉಪನಿಯಮದಲ್ಲಿ ನಮೂದಿಸಿದಂತೆ ಮಹಾಸಭೆಗೆ ಹಾಜರಾತಿ ಮತ್ತು ಕನಿಷ್ಠ ಸೇವೆಗಳ ಬಳಕೆ ಅನಿವಾರ್ಯವಾಗಿದೆ. ಸದಸ್ಯರು ಬಳಸಬೇಕಾದ ಕನಿಷ್ಠ ಸೇವೆಗಳನ್ನು ನಿರ್ಧರಿಸುವ ಪೂರ್ಣ ಅಧಿಕಾರ ಬ್ಯಾಂಕಿಗೆ ಇದೆ. ಹಾಗಾಗಿ ತನ್ನ ಶೇ.90ರಷ್ಟು ಸದಸ್ಯರು ಬಳಸಿಕೊಳ್ಳಬಹುದಾದ ಕನಿಷ್ಠ ಸೇವೆಗಳನ್ನು ತನ್ನ ಉಪನಿಯಮದಲ್ಲಿ ಅಳವಡಿಸಿಕೊಳ್ಳಬಹುದಾಗಿದೆ.

**2. 'ಬಡವರ ಬಂಧು' ಯೋಜನೆಯಡಿಯಲ್ಲಿ ಸಾಲ ವಿತರಿಸಲು ಸರಕಾರಿ ಇಲಾಖೆಯಿಂದ ಮತ್ತು ಇತರೆಡೆಯಿಂದ ಒತ್ತಾಯಿಸಲಾಗುತ್ತಿದೆ. ಈ ಯೋಜನೆಯ ಪೂರ್ಣ ವಿವರ ನೀಡಿ. ಯೋಜನೆಯಡಿಯಲ್ಲಿ ನಾಮ ಮಾತ್ರ ಸದಸ್ಯತ್ವ ನೀಡಿ ಸಾಲ ವಿತರಿಸಬಹುದೇ? ನಮ್ಮ ಬ್ಯಾಂಕು ಈ ಯೋಜನೆಯ ವ್ಯಾಪ್ತಿಯಲ್ಲಿ ಬರುತ್ತದೆಯೇ?**

**– ವೀರಪುಲಿಕೇಶಿ ಸಹಕಾರ ಬ್ಯಾಂಕ್ ಲಿ., ಬಾದಾಮಿ**

**– ಎಂ.ವಿಶ್ವೇಶ್ವರಯ್ಯ ಸಹಕಾರ ಬ್ಯಾಂಕ್ ಲಿ., ಕಲಬುರ್ಗಿ**

**ಉತ್ತರ :** ಬೀದಿ ವ್ಯಾಪಾರಿಗಳು ಮತ್ತು ಸಣ್ಣ ವ್ಯಾಪಾರಿಗಳಿಗೆ ಸಹಕಾರ ಬ್ಯಾಂಕುಗಳ ಮೂಲಕ ಬ್ಯಾಂಕಿಂಗ್ ಸೇವೆ ಮತ್ತು ಸಾಲದ ವ್ಯವಸ್ಥೆ ಕಲ್ಪಿಸಲು 'ಬಡವರ ಬಂಧು' ಯೋಜನೆಯನ್ನು ಕರ್ನಾಟಕ ಸರಕಾರ ದಿನಾಂಕ:09.11.2018ರ ತನ್ನ ಆದೇಶ ಸಂಖ್ಯೆ:147ರಲ್ಲಿ ಪ್ರಕಟಿಸಿದೆ. ಯೋಜನೆಯಡಿಯಲ್ಲಿ ಸಾಲದ ಪ್ರಮಾಣ ತಲಾ 2000ರೂಪಾಯಿಯಿಂದ 10,000 ರೂ.ವರೆಗೆ ಇರುತ್ತದೆ. ಜಿಲ್ಲಾ ನಗರ ಪ್ರದೇಶದಲ್ಲಿ ಬಿಟ್ಟು ಫಲಾನುಭವಿಗಳ ಸಂಖ್ಯೆ 1000 ಮೀರಬಾರದು. ಬ್ಯಾಂಕನ್ನು ಗುರುತಿಸಲು, ಡಿಸಿಸಿ ಬ್ಯಾಂಕಿನ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಬ್ಯಾಂಕುಗಳ ಸಮಿತಿಯನ್ನು ನೇಮಿಸಲಾಗಿದೆ. ಜಿಲ್ಲಾ ಮಟ್ಟದ ಸಹಕಾರ ಸಂಘಗಳ ಉಪನಿಬಂಧಕರು ಮತ್ತು ಸಹಕಾರ ಬ್ಯಾಂಕುಗಳ ಅಧ್ಯಕ್ಷರುಗಳು ಸಮಿತಿಯ ಸದಸ್ಯರಾಗಿರುತ್ತಾರೆ. ಬ್ಯಾಂಕುಗಳು ಫಲಾನುಭವಿಗಳಿಗೆ ಬಡ್ಡಿರಹಿತ ಸಾಲವನ್ನು ನೀಡಬೇಕಾಗಿದ್ದು, ಬ್ಯಾಂಕು ಸರಕಾರದಿಂದ ಶೇ.10ರ ಬಡ್ಡಿ ಸಹಾಯಧನ ಪಡೆದಿರುತ್ತದೆ. ಈ ಯೋಜನೆ ಮಾರ್ಚ್ 31, 2019ರವರೆಗೆ ಜಾರಿಯಲ್ಲಿರುತ್ತದೆ. ಸಾಲದ ಅವಧಿ ಮೂರು ತಿಂಗಳಾಗಿದ್ದು, ಕ್ಯಾಶ್ ಕ್ರೆಡಿಟ್ ರೂಪದಲ್ಲಿರುತ್ತದೆ. ಸರಕಾರದಿಂದ ಬಡ್ಡಿ ಸಹಾಯಧನ ಪಡೆಯಲು ಬಿಲ್ಲುಗಳನ್ನು ಸಹಕಾರ ಸಂಘಗಳ ಉಪನಿಬಂಧಕರು ದೃಢೀಕರಿಸಬೇಕಾಗಿರುವುದರಿಂದ, ನಿಮ್ಮ ಬ್ಯಾಂಕನ್ನು ಈ ಯೋಜನೆಯಡಿಯಲ್ಲಿ ಜಿಲ್ಲಾ ಮಟ್ಟದ ಸಮಿತಿ ಆಯ್ಕೆ ಮಾಡಿದೆಯೆಂದು ಮತ್ತು ಒಟ್ಟು ಫಲಾನುಭವಿಗಳ ಸಂಖ್ಯೆ ನಿಮ್ಮ ನಗರ ಪ್ರದೇಶಕ್ಕೆ ಸರಕಾರ ವಿಧಿಸಿದ ಮಿತಿಯೊಳಗಿದೆಯೆಂದು ಖಾತರಿ ಪಡಿಸಿಕೊಳ್ಳಿ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿದ ಎಲ್ಲಾ ನಿಬಂಧನೆಗಳನ್ನು ಚಾಚೂ ತಪ್ಪದಂತೆ ಪಾಲಿಸಿ. ಫಲಾನುಭವಿಗಳನ್ನು ನಾಮಮಾತ್ರ ಸದಸ್ಯರನ್ನಾಗಿ ಮಾಡಿ ಸಾಲನೀಡಬಹುದು. ಇದಕ್ಕೆ ಭಾರತೀಯ ರಿಜರ್ವ್ ಬ್ಯಾಂಕಿನ ಪೂರ್ವಾನುಮತಿ ಬೇಕಿಲ್ಲ. ಸಾಲ ವಸೂಲಾಗದಿದ್ದರೆ ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ ಸುಸ್ತಿಸಾಲವೆಂದು ಗುರುತಿಸಬೇಕು.

## ಸದಲಗಾ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ : ಅಧ್ಯಕ್ಷರ & ಉಪಾಧ್ಯಕ್ಷರ ಅವಿರೋಧ ಆಯ್ಕೆ



**ಪ್ರಕಾಶ ಜಿನಗೌಡಾ ಪಾಟೀಲ**
ಅಧ್ಯಕ್ಷರು



**ಉದಯಕುಮಾರ ಬಾಬಾಸಾಬ ಪಾಟೀಲ**
ಉಪಾಧ್ಯಕ್ಷರು

**ಸದಲಗಾ :** ಸದಲಗಾ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನ 2019–2024ರ ಐದು ಸಹಕಾರ ವರ್ಷಗಳ ಅವಧಿಗೆ ಜರುಗಿದ ಚುನಾವಣೆಯಲ್ಲಿ ನಿರ್ದೇಶಕ ಮಂಡಲಿ ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ದಿನಾಂಕ : 30.01.2019ರಂದು ಜರುಗಿದ ಬ್ಯಾಂಕಿನ ಪದಾಧಿಕಾರಿಗಳ ಚುನಾವಣೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾಗಿ ಶ್ರೀ ಪ್ರಕಾಶ ಜಿನಗೌಡಾ ಪಾಟೀಲ (ಸಾಬಗೊನ್ನವರ) ಹಾಗೂ ಉಪಾಧ್ಯಕ್ಷರಾಗಿ ಶ್ರೀ ಉದಯಕುಮಾರ ಬಾಬಾಸಾಬ ಪಾಟೀಲ (ಗವಳಿ) ರವರುಗಳು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ರಿಟರ್ನಿಂಗ್ ಅಧಿಕಾರಿ ಶ್ರೀ ಎಂ.ಬಿ.ಪೂಜಾರ ಇವರು ಘೋಷಿಸಿರುತ್ತಾರೆಂದು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಎಸ್.ಎಮ್. ಪಾರಿಸಖೋತ ರವರು ಪತ್ರಿಕೆಗೆ ತಿಳಿಸಿರುತ್ತಾರೆ.

# ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಜನವರಿ 30ರ ವರೆಗಿನ ಮಾಹಿತಿ ಪ್ರಕಾರ, ದೇಶದ ಜನ್ ಧನ್ ಖಾತೆಗಳಲ್ಲಿನ ಠೇವಣಿ ಮೊತ್ತ ರೂ. 90,000 ಕೋಟಿ ಸಮೀಪಕ್ಕೆ ಬಂದಿದೆ. ಠೇವಣಿದಾರರ ಅಪಘಾತ ವಿಮೆ ಮೊತ್ತವನ್ನು ರೂ. 2 ಲಕ್ಷಕ್ಕೆ ಏರಿಸಿದೆ.
- ದಿಢೀರನೆ ಸುರಿದ ಗುಡುಗು ಸಹಿತ ಧಾರಾಕಾರ ಮಳೆಗೆ ಸಿಲಿಕಾನ್ ಸಿಟಿ ಬೆಂಗಳೂರು ತತ್ತರಿಸಿ ಹೋಗಿದ್ದು, ಕಳೆದ 10 ವರ್ಷಗಳಲ್ಲೇ ನಗರದಲ್ಲಿ ಸುರಿದ ಭಾರಿ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.
- ಧರ್ಮಸ್ಥಳ ಬಾಹುಬಲಿಗೆ ಮಹಾಮಸ್ತಕಾಭಿಷೇಕ ಕಾರ್ಯಕ್ರಮಕ್ಕೆ ಚಾಲನೆ ಸಿಕ್ಕಿದೆ. ಧರ್ಮಸ್ಥಳದಲ್ಲಿ ಸಂತರ ಸಮ್ಮೇಳನ ಪ್ರಾರಂಭವಾಗಿದೆ.
- ಉತ್ತರ ಪ್ರದೇಶ ಮತ್ತು ಉತ್ತರಾಖಂಡದಲ್ಲಿ ಕಳ್ಳಬಟ್ಟಿ ಸಾರಾಯಿ ಸೇವಿಸಿ ಮೃತಪಟ್ಟವರ ಸಂಖ್ಯೆ 94ಕ್ಕೆ ಏರಿಕೆಯಾಗಿದ್ದು, ಇನ್ನೂ ಹಲವರ ಸ್ಥಿತಿ ಗಂಭೀರವಾಗಿದೆ.
- ಪಾಕಿಸ್ತಾನ ಸೈನಿಕರ ಮತ್ತು ಅಲ್ಲಿನ ಉಗ್ರರ ಸ್ನೈಪರ್ ರೈಫಲ್ ಗಳಿಗೆ ಬಲಿಯಾಗುತ್ತಿದ್ದ ಭಾರತೀಯ ಸೈನಿಕರ ಬಹು ದಿನಗಳ ಆಸೆ ಕೊನೆಗೂ ಈಡೇರಿದ್ದು, ಇದೀಗ ಭಾರತೀಯ ಸೈನಿಕರ ಕೈಗೂ ಅತ್ಯಾಧುನಿಕ ಡೆಡ್ಲಿ ಸ್ನೈಪರ್ ರೈಫಲ್‌ಗಳು ಬಂದಿವೆ.
- ಲೋಡೆಡ್ ಗನ್ ಕೈಗೆ ಸಿಕ್ಕಿದ್ದರ ಪರಿಣಾಮ 4 ವರ್ಷದ ಬಾಲಕನೋರ್ವ ತಮಾಷೆ ಮಾಡಲು ಹೋಗಿ ಗರ್ಭಿಣಿ ತಾಯಿಯ ಹಣೆಗೆ ಗುಂಡಿಟ್ಟು ಶೂಟ್ ಮಾಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.
- ಸುಮನ್ ಕುಮಾರಿ ಪಾಕಿಸ್ತಾನದ ಮೊದಲ ಹಿಂದೂ ಮಹಿಳಾ ನ್ಯಾಯಾಧೀಶೆಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಖಂಬರ್–ಶಹದಾದ್ಕೋಟ್ ಜಿಲ್ಲೆಯ ಮೂಲದವರಾಗಿರುವ ಸುಮನ್ ಕುಮಾರಿ ಅದೇ ಜಿಲ್ಲೆಯಲ್ಲಿ ಸಿವಿಲ್ ನ್ಯಾಯಾಧೀಶೆಯಾಗಿ ಸೇವೆ ಸಲ್ಲಿಸಲಿದ್ದಾರೆ.

## ಓದುಗರ ಅನಿಸಿಕೆ...



**ಭರಪೂರ ಕೊಡುಗೆ :** ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ತೆರಿಗೆದಾರರಿಗೆ ಅಂಚೆ ಕಚೇರಿ ಮತ್ತು ಬ್ಯಾಂಕುಗಳಲ್ಲಿನ ರೂ. 40,000 ವರೆಗಿನ ಬಡ್ಡಿ ಆದಾಯವನ್ನು ತೆರಿಗೆ ಮುಕ್ತಗೊಳಿಸಲಾಗಿದೆ. ಸೆಕ್ಷನ್ 54ರ ಅಡಿಯಲ್ಲಿ ಬಂಡವಾಳ ಲಾಭ ತೆರಿಗೆ ವಿನಾಯಿತಿಯು ರೂ. 2 ಕೋಟಿವರೆಗೆ ಸಿಗಲಿದೆ. 2 ಮನೆಗಳ ಆಸ್ತಿಯ ಮೇಲೆ ಬಂಡವಾಳದ ವಿನಾಯಿತಿ ಲಭ್ಯವಿದೆ. ಮಾರಾಟವಾಗದ ಮನೆಗಳ ಸಾಮಾನ್ಯ ಬಾಡಿಗೆಗೆ ಆದಾಯ ತೆರಿಗೆ ವಿನಾಯಿತಿ ಅವಧಿಯನ್ನು 1 ವರ್ಷದಿಂದ 2 ವರ್ಷಗಳಿಗೆ ವಿಸ್ತರಿಸಲಾಗಿದೆ. ಒಟ್ಟಾರೆ ಚುನಾವಣಾ ಪೂರ್ವ ಜನಪ್ರಿಯ ಯೋಜನೆಗಳ ಭರಪೂರ ಕೊಡುಗೆ!

**▶▶ ಶ್ರೀಮತಿ ಅನಿತಾ ರಾಮಸ್ವಾಮಿ, ಹಾಸನ**

**ಯಶಸ್ವಿನಿ ಯೋಜನೆಯನ್ನು ಮರು ಜಾರಿಗೊಳಿಸಲಿ :** 'ಆಯುಷ್ಮಾನ್ ಭಾರತ್ –ಆರೋಗ್ಯ ಕರ್ನಾಟಕ' ಎಂಬ ಸಂಯೋಜಿತ ಯೋಜನೆಯನ್ನು ಕಳೆದ ನವೆಂಬರ್ 15ರಿಂದ ರಾಜ್ಯದಲ್ಲಿ ಜಾರಿ ಮಾಡಲಾಗಿದೆ. ಆದರೆ, ಈ ಸಂಯೋಜಿತ ಯೋಜನೆಯಡಿ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಪಡೆದುಕೊಳ್ಳುವಲ್ಲಿ ಫಲಾನುಭವಿಗಳಿಗೆ ಹಲವಾರು ಗೊಂದಲಗಳು ಸೃಷ್ಟಿಯಾಗಿವೆ. ನಮ್ಮೆಲ್ಲರಿಗೂ ಯಾವುದೇ ಗೊಂದಲಕ್ಕೆ ಅವಕಾಶವಿಲ್ಲದ, ಎಲ್ಲರಿಗೂ ಸುಲಭವಾಗಿ ದೊರಕುತ್ತಿದ್ದ ಹಿಂದಿನ 'ಯಶಸ್ವಿನಿ' ಯೋಜನೆಯೇ ಉತ್ತಮವಾಗಿತ್ತು ಅದನ್ನು ರಾಜ್ಯ ಸರ್ಕಾರ ಮರು ಜಾರಿಗೊಳಿಸಲಿ.

**▶▶ ಸುಧೀಂದ್ರ ನಾಡಕರ್ಣಿ, ಗದಗ**

**ಸಂಗ್ರಹ ಯೋಗ್ಯವಾಗಿತ್ತು :** ನಾವು ಮಾಡುವ ಹೂಡಿಕೆ ಎಂಬ ಉಳಿತಾಯದ ಹಣದಿಂದ ಹೆಚ್ಚುವರಿಯಾಗಿ ಒಂದಿಷ್ಟು ಆದಾಯ ಗಳಿಸಲು ಅನುಸರಿಸುವ ವಿಧಾನವಾಗಿದೆ. ನಮ್ಮ ಭವಿಷ್ಯದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು, ಒಂದಿಷ್ಟು ಹೂಡಿಕೆ ಮಾಡುವುದು ಸಹಜ. ಮ್ಯೂಚುವಲ್ ಫಂಡ್, ನಿಶ್ಚಿತ ಠೇವಣಿ, ಸಾಲಪತ್ರ... ಹೀಗೆ ಹೂಡಿಕೆಗೆ ಇಂದು ಸಾಕಷ್ಟು ಆಯ್ಕೆಗಳು ಲಭ್ಯ ಇವೆ. ಹೂಡಿಕೆಯ ಗರಿಷ್ಠ ಲಾಭವನ್ನು ಪಡೆಯಬೇಕಾದರೆ ಈ ಎಲ್ಲ ಆಯ್ಕೆಗಳ ಬಗ್ಗೆ ಮಾಹಿತಿ ನೀಡಿದ ಕಳೆದ ವಾರದ ಸಂಚಿಕೆ ಸಂಗ್ರಹ ಯೋಗ್ಯವಾಗಿತ್ತು.

**▶▶ ಸುರೇಶ್ ಹಿರೇಮಠ, ದಾವಣಗೆರೆ**

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.